ಕರ್ನಾಟಕ ವಿಧಾನಸಭೆ

ಮಂಗಳವಾರ 20ನೇ ಸೆಪ್ಟೆಂಬರ್ 1994 ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಗ್ಗೆ 11.45 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: ಶ್ರೀ. ವಿ.ಎಸ್. ಕೌಜಲಗಿ ಅವರು ಪೀಠವನ್ನು ಅಲಂಕರಿಸಿದ್ದರು.

ಶ್ರೀ ಆರ್. ದಯಾನಂದರಾವ್:– ಸನ್ಮಾನ್ಯ ಅಧ್ಯಕ್ಷರೇ, ನನಗೆ ಒಂದು ನಿಮಿಷ ಅವಕಾಶ ಕೊಡಬೇಕು.

ಅಧ್ಯಕ್ಷರು:– ಏನು ಸ್ವಾಮಿ ?

ಶ್ರೀ ಆರ್. ದಯಾನಂದರಾವ್:– ಇವತ್ತಿನ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ನಿನ್ನೆ ಶ್ರೀಮಾನ್ ಬಂಗಾರಪ್ಪನವರು ಬಾಯ್ಕಾಟ್ ಮಾಡಿದರು. ಅವರ ಜೊತೆ ನನ್ನ ಹೆಸರನ್ನೂ ಸೇರಿಸಿದ್ದಾರೆ. ''ಇಂಕ್ಲೂಡಿಂಗ್ ದಯಾನಂದರಾವ್ ಅಂತ ಇದೆ. ಇದು ರೆಕಾರ್ಡಿನಲ್ಲಿ ಏನಾದರೂ ಬಂದಿದೆಯೋ ? ಇದನ್ನು ತಾವು ನೋಟ್ ಮಾಡಬೇಕು.

† ಅಧ್ಯಕ್ಷರು:– ಇದನ್ನು ನಾನು ನೋಡುತ್ತೇನೆ.

ಶ್ರೀ ಆರ್. ದಯಾನಂದರಾವ್:– ಈ ಒಂದು ವಿಚಾರದಲ್ಲಿ ನಮಗೂ ಮತ್ತು ಬಂಗಾರಪ್ಪನವರಿಗೂ ಯಾವುದೂ ಸಂಬಂಧ ಇಲ್ಲ. ನಮ್ಮ ಪಾರ್ಟಿಯೇ ಬೇರೆ ಅವರ ಪಾರ್ಟಿಯೇ ಬೇರೆ. This is a very serious matter. This has gone to the records. So I request the hon'ble Speaker to take out that name.

ಅಧ್ಯಕ್ಷರು:– ಇದನ್ನು ನಾನು ನೋಡುತ್ತೇನೆ ಬಿಡಿ.

ಶ್ರೀ ಆರ್. ದಯಾನಂದರಾವ್:– ಮತ್ತೊಂದು, ತಾವು ಪ್ರೆಸ್‌ನವರಿಗೆ ಈ ಬಗ್ಗೆ ಅವರು ಪುನರ್ ಪ್ರಕಟಣೆ ಮಾಡಬೇಕು ಎಂದು ಹೇಳಬೇಕು.

ಅಧ್ಯಕ್ಷರು:– ನಾನು ತೆಗೆದು ನೋಡುತ್ತೇನೆ.

ಸಭೆಯ ಮುಂದೆ ಮಂಡಿಸಲಾದ ಕಾಗದ ಪತ್ರಗಳು

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು):– ಮಾನ್ಯ ಅಧ್ಯಕ್ಷರೇ, 1987ನೇ ಸಾಲಿನ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5)ನೇ ಕಲಮಿನ ಮೇರಗೆ:

'1988ರಿಂದ 1990 ಹಾಗೂ 1992–93ನೇ ಸಾಲುಗಳ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ತಪಾಸಣಾ ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು:– ವರದಿಗಳನ್ನು ಮಂಡಿಸಲಾಯಿತು.

ಶಾಸನ ರಚನಾ ಕಾರ್ಯಕಲಾಪಗಳು ಪರ್ಯಾಲೋಚನಾ ಪ್ರಸ್ತಾಪ (ಮುಂದುವರೆದ ಚರ್ಚೆ)

1) ಕರ್ನಾಟಕ ಅನುಸೂಚಿತ ಜಾತಿ. ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ